ಹೆಚ್ಚೆಚ್ಚು ಬಂಧನಕ್ಕೆ ಒಳಗಾಗುತ್ತದೆ. ಮಿದುಳು ಅಗತ್ಯಕ್ಕಿಂತ ಹೆಚ್ಚು ಅವನತಿ ಹೊಂದುತ್ತದೆ. ಕೊನೆಗೆ ಪ್ರತಿಯೊಬ್ಬರು ಸೃಜನಶೀಲವಾಗಿ ಯೋಚಿಸುವುದನ್ನೇ ನಿಲ್ಲಿಸಿಬಿಡುತ್ತಾರೆ.

**◆ ನೀವು ವಾಸಿಸುವ ಚೆಂಗ್ಡು ನಗರ 'ತಾವೊಯಿಸಂ'ನ ಜನ್ಮಸ್ಥಳ ಹಾಗೂ ತೊಟ್ಟಿಲು. ಈ ಅನನ್ಯವಾದ ಪುರಾತನ ತಾತ್ವಿಕ ಪಂಥದ ಬೇರುಗಳು ಎಷ್ಟರಮಟ್ಟಿಗೆ ಆಧುನಿಕ ಚೀನಿಗರ ನಿತ್ಯ ಬದುಕಿನಲ್ಲಿ ಈಗಲೂ ಜೀವಂತವಾಗಿವೆ?**

ಪ್ರಾಚೀನ ಆಧ್ಯಾತ್ಮಿಕ ಸಂಪ್ರದಾಯಗಳು ಚೀನಾದ ಜನರಿಗೆ ಹಲ ಬಗೆಯ ಆಧ್ಯಾತ್ಮಿಕ ಉನ್ನತಿಯ ಸಾರವನ್ನು ಕಟ್ಟಿಕೊಟ್ಟಿವೆ, ಆಳ ಅಗಲವನ್ನ ಬಿಂಬಿಸಿವೆ. ಆದರೆ ಈಗವು ನಮ್ಮಿಂದ ಬಹಳ ದೂರ ಸರಿದಂತೆ ಕಾಣುತ್ತವೆ. ಅತೀ ಎನಿಸುವ ವಾಣಿಜ್ಯ ಚಟುವಟಿಕೆಗಳು ಮತ್ತು ಭೌತಿಕ ಬಯಕೆಗಳ ಅಭಿವೃದ್ಧಿ ಎಲ್ಲರನ್ನು ತಮ್ಮೊಳಗೆ ಬಂಧಿಸುತ್ತಿವೆ. ಮತ್ತೆ ನಿಧಾನಕ್ಕೆ ಜನಪ್ರಿಯ ಸಂಸ್ಕೃತಿಯ ಭಾಗವೆಂಬಂತೆ ಅವರು ಲೌಕಿಕ ಪ್ರಪಂಚದಲ್ಲಿ ತಮ್ಮನ್ನ ತಾವು ಕಳೆದುಕೊಳ್ಳುತ್ತಾರೆ. ಬಹುತೇಕ ಜನ ಅತ್ಯಂತ ಮೇಲ್ಪದರದ ಭೌತಿಕ ಸುಖ ಮತ್ತು ಮನರಂಜನೆಯಲ್ಲಿ ಮುಳುಗಿರುತ್ತಾರೆ. ಆ ಕ್ಷಣದ ಸುಖವನ್ನಷ್ಟೇ ಅವರು ಬಯಸುತ್ತಾರೆಯೆ ಹೊರತು ಹೃದಯದ ಪಿಸುಮಾತು ಕೇಳಲು ತಯಾರಿರುವುದಿಲ್ಲ. ಬಹುತೇಕರು ಆಧ್ಯಾತ್ಮಿಕ ಹುಡುಕಾಟ ಮತ್ತು ಪ್ರಾಚೀನ ನಂಬಿಕೆಗಳನ್ನು ಬಿಟ್ಟುಕೊಟ್ಟಿದ್ದಾರೆ. ಯಾರಿಗೂ ಈಗ ಅಷ್ಟು ವ್ಯವಧಾನವಿಲ್ಲ. ಕೇವಲ ಯಾಂತ್ರಿಕ ಆಚರಣೆಗಳಾಗಿ ಉಳಿದು, ಅವುಗಳೀಗ ನೋವಿನ ಸಮಯದಲ್ಲಿ ಮಾತ್ರ ಗುಪ್ತವಾಗಿ ನೆನೆಯಲ್ಪಡುತ್ತವೆ.

**◆ ಚೀನಾದಲ್ಲಿ 'ಮ್ಯಾಂಡರಿನ್' ಒಂದು ಅಫಿಷಿಯಲ್ ಭಾಷೆ. ಆದರೆ ನೀವು ಸಾಹಿತ್ಯ ರಚನೆಗಾಗಿ ಬಳಸುವ Sichuan hua ಎಂಬ ಸ್ಥಳೀಯ dialectನ ವಿಶೇಷತೆಯೇನು? ಆ ಆಡುನುಡಿಯನ್ನೇ ಯಾಕೆ ನಿಮ್ಮ ಕವನದ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡಿರಿ?**

ನಿಜ ಹೇಳಬೇಕೆಂದರೆ, ನಾನು ಸಿಚುವಾನ್ ಉಪಭಾಷೆಗಿಂತಲೂ ಹೆಚ್ಚು ಬರೆಯುವುದು ಮ್ಯಾಂಡರಿನ್ ಭಾಷೆಯಲ್ಲಿ. ಸಿಚುವಾನ್ ಕೂಡ ಮ್ಯಾಂಡರಿನ್ ಅನ್ನು ಹೋಲುವ ಭೌಗೋಳಿಕ ಉಪಭಾಷೆ. ಆದರೆ ಧ್ವನಿ ಮತ್ತು ಶೈಲಿಯಲ್ಲಿ ಎರಡಕ್ಕೂ ಅಗಾಧವಾದ ವ್ಯತ್ಯಾಸಗಳಿವೆ. ಆಡುನುಡಿಗಳು ಒಂದು ಪ್ರದೇಶದ ಶೈಲಿಗೆ ಹತ್ತಿರವಾಗಿದ್ದು ಜನರ ಸಂವಹನದ ಮೇಲೆ ಪರಿಣಾಮ ಬೀರುತ್ತವೆ. ಮತ್ತವು ಸ್ಥಳೀಯ ಜನರ ಗುಣಾವಗುಣಗಳನ್ನು ಪ್ರತಿಬಿಂಬಿಸುತ್ತವೆ. ಕೆಲವು ವೈಜ್ಞಾನಿಕ ಅಂಶಗಳ ಪ್ರಕಾರ, ಉಪಭಾಷೆಗಳು ಹೆಚ್ಚು ಚೈತನ್ಯಯುತ ಅಭಿವ್ಯಕ್ತಿಯನ್ನು ಹೊಂದಿವೆ. ಕೃತಿ ರಚನೆಯ ಸಮಯದಲ್ಲಿ ಬರವಣಿಗೆಯ ಭಾವನಾತ್ಮಕ ಹಾಗೂ ವೈಚಾರಿಕ ಅಗತ್ಯಕ್ಕೆ ತಕ್ಕಂತೆ ನಾನು ಭಾಷೆಯನ್ನ ಆಯ್ದುಕೊಳ್ಳುತ್ತೇನೆ. ನಿಶ್ಚಿತ ಸಾರ್ವತ್ರಿಕ ಗುಣಗಳಿರುವ ಮ್ಯಾಂಡರಿನ್ ಭಾಷೆಯನ್ನ ಬಳಸಲು ನಾನು ಹೆಚ್ಚು ಇಷ್ಟಪಡುತ್ತೇನೆ. ನನ್ನ ಬರವಣಿಗೆಯ ಶೈಲಿಗೆ ಅದು ಸರಿ ಹೊಂದುತ್ತದೆ

**◆ ಶ್ರೀಮಂತ ಸಾಹಿತ್ಯ ಪರಂಪರೆಯುಳ್ಳ ನಿಮ್ಮಲ್ಲಿ ಈಗ ಯಾವ ಬಗೆಯ ಸಾಹಿತ್ಯದ ಟ್ರೆಂಡ್ ನಡಿತಾ ಇದೆ? ವಿಶೇಷವಾಗಿ ಕಥೆ ಕವನ ಕಾದಂಬರಿಗಳಲ್ಲಿ...**

ಪ್ರಸ್ತುತ ಚೀನಾದಲ್ಲಿ 'ಇದು ಮಹತ್ವದ್ದು' ಎಂದು ಗುರುತಿಸಬಹುದಾದ ಸಾಹಿತ್ಯಿಕ ಚಿಂತನಾ ಪ್ರವೃತ್ತಿಯ ಕೊರತೆ ಇದೆ. ನೀವು ಹೇಳಿದ ಹಾಗೆ ಸದ್ಯಕ್ಕೆ ಯಾವುದೇ ಟ್ರೆಂಡ್ ಕಾಣುತ್ತಿಲ್ಲ. ವಾಸ್ತವವಾದ ಈಗಲೂ ಡಾಮಿನೇಟ್ ಮಾಡುತ್ತಿದೆ. ಅದು ಮುಖ್ಯವಾಹಿನಿಯ ಸೌಂದರ್ಯ ಪ್ರಜ್ಞೆ ಮತ್ತು ಮೇಲ್ಪದರಿನ ಮೌಲ್ಯಗಳನ್ನು ನಿಯಂತ್ರಿಸುತ್ತಿದೆ. ಈಗ ಎಲ್ಲಾ ಕಡೆ ನಡೆದಿರುವಂತೆ, ಸರ್ಕಾರಿ ಕೃಪಾಪೋಷಿತ ಮಾಧ್ಯಮಗಳ ಕಿರುಚುವಿಕೆ ಮತ್ತು ತಿರುಚುವಿಕೆ ಸಾರ್ವಜನಿಕರ ಬೌದ್ಧಿಕ ಮಟ್ಟ ಮೇಲೇಳದಂತೆ ಮತ್ತು ಅಭಿರುಚಿಯ ಗುಣಮಟ್ಟ ಕುಸಿಯುವಂತೆ ಮಾಡುತ್ತಿವೆ. ಹಾಗಿದ್ದೂ ಜನಾಭಿಪ್ರಾಯ ರೂಪಿಸುವಲ್ಲಿ ಸೃಜನಶೀಲ ಸಾಹಿತ್ಯ ಚೀನಾದ ನೆಲದ ವಾಸ್ತವಕ್ಕೆ ಕನ್ನಡಿ ಹಿಡಿಯುತ್ತಲೇ ಬಂದಿದೆ. ಆ 'ನವ ವಾಸ್ತವಿಕತೆ' ಕೂಡ ಈವರೆಗೆ ಬೆಳೆದು ಬಂದ ಚೀನಾದ ಸಾಹಿತ್ಯಿಕ ಪರಿಕಲ್ಪನೆಗಳಿಂದ ಮುಕ್ತವಾಗಿಲ್ಲ. ಹಾಗಿದ್ದೂ ಅಫಿಶಿಯಲ್ ಸಾಹಿತ್ಯಕ್ಕೆ ಸಮನಾಂತರವಾಗಿ ಕ್ರಿಯಾತ್ಮಕ, ಚಲನಶೀಲ ಮತ್ತು ವೈವಿಧ್ಯಮಯ ಜಾನಪದ ಸೃಷ್ಟಿರೂಪಗಳು